KANNADA:Layout 1 02/11/11 5:04 PM Page 1



# ಹಲವಾರು ಮಾನವ ಹಕ್ಕುಗಳ ಕುರಿತಾದ ವಿಷಯಗಳ ಬಗ್ಗೆ ಪೊಲೀಸ್ ಸಿಬ್ಬಂದಿಯವರಿಗೆ ಮಾರ್ಗದರ್ಶಿ ಸೂತ್ರಗಳು

सर्वे
भवन्तु सुखिनः

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

KANNADA:Layout 1 02/11/11 5:04 PM Page 2

# ಹಲವಾರು ಮಾನವ ಹಕ್ಕುಗಳ ಕುರಿತಾದ ವಿಷಯಗಳ ಬಗ್ಗೆ ಪೊಲೀಸ್ ಸಿಬ್ಬಂದಿಯವರಿಗೆ ಮಾರ್ಗದರ್ಶಿ ಸೂತ್ರಗಳು

सर्वे
भवन्तु सुखिनः

**ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ**
**ಫರೀದ್‌ಕೋಟ್ ಹೌಸ್, ಕೋಪರ್ನಿಕಸ್ ಮಾರ್ಗ್,**
**ಹೊಸ ದೆಹಲಿ - 110 001**

# Guidelines for Police Personnel on Various Human Rights Issues (In Kannada)

**First Edition:** 10 December 2010
© 2010 National Human Rights Commission

**National Human Rights Commission**
Faridkot House, Copernicus Marg, New Delhi-110 001

**Printed at: Shri Ganesh Associats**
C-83/11, Street No. 7, Mohanpuri, Moajpur, Delhi - 110 053

KANNADA:Layout 1 02/11/11 5:04 PM Page 4

# ಅನುಸೂಚಿ


| ಕ್ರ.ಸಂಖ್ಯೆ | ಅಧ್ಯಾಯ | ಪುಟ ಸಂಖ್ಯೆ |
| --- | --- | --- |
| | ಮುನ್ನುಡಿ | 1-3 |
| 1) | ಬಂಧನ | 4-9 |
| 2) | ನಿರೋಧಕ ಬಂಧನ | 10-12 |
| 3) | ಮಹಿಳೆಯರ ರಕ್ಷಣೆ | 13-15 |
| 4) | ಮಕ್ಕಳ ರಕ್ಷಣೆ | 16-19 |
| 5) | ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳ ಮಕ್ಕುಗಳ ರಕ್ಷಣೆ | 20-22 |
| 6) | ಹಿರಿಯ ನಾಗರೀಕರ ಹಕ್ಕುಗಳ ರಕ್ಷಣೆ | 23-24 |
| 7) | ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ | 25-27 |
| 8) | ಒತ್ತಾಯದ/ಜೀತದಾಳು ಪದ್ದತಿ ಮತ್ತು ಪೊಲೀಸುಗಾರಿಗೆ | 28-29 |
| 9) | ಅನಿರೀಕ್ಷಿತ ಸಣೆಸಾಟ | 30-32 |
| 10) | ಬಯೋತ್ಪಾದಕತೆ ಮತ್ತು ಪೊಲೀಸುಗಾರಿಕೆ | 33-36 |

# ಮುನ್ನುಡಿ

ಪೊಲೀಸುಗಾರಿ ಮತ್ತು ಮಾನವ ಹಕ್ಕುಗಳ ವಿಷಯಗಳು ರಾಜ್ಯಗಳಿಗೆ ಹಾಗೂ ನಾಗರೀಕರಿಗೆ ತುಂಬಾ ಪ್ರಮುಖವಾದ ವಿಷಗಳೆಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಹೆಚ್‌ಆರ್‌ಸಿ)ವು ಮನಗಂಡಿದೆ.

ಇತ್ತೀಚಿನ ದಿನಗಳಲ್ಲಿ ಪೊಲೀಸರ ಚಟುವಟಿಕೆಗಳು ನ್ಯಾಯ ನಿಯಮಗಳನ್ನು ಧಾರಣಾ ಮಾಡುವುದು ಹಾಗೂ ಕೃತ್ಯಗಳನ್ನು ತಡೆಗಟ್ಟುವುದಕ್ಕೆ ಮತ್ತು ತನಿಖೆಕೈಗೊಳ್ಳುವುದಕ್ಕೆ ವಿಸ್ತಾರಗೊಂಡಿದೆ. ಅವರುಗಳು ಮೂಲಭೂತ ಮಾನವ ಹಕ್ಕಾದ–ಮಾನವ ಜೀವವನ್ನು ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸುವದಷ್ಟೇ ಅಲ್ಲದೆ, ಅವರುಗಳು ಅಲ್ಪಸಂಖ್ಯಾತರ, ಸಮಾಜದ ಬಡ ವರ್ಗಗಳ, ಮಹಿಳೆಯರ ಮತ್ತಿತರರ ವಿರುದ್ಧದ ತಾರತಮ್ಯವನ್ನು ಹೊಗಲಾಡಿಸಲು ರಚಿಸಲಾಗಿರುವ ಅರ್ಥಗರ್ಭಿತ ಸಾಮಾಜಿಕ ಶಾಸನಗಳನ್ನು ಜಾರಿಗೊಳಿಸುವುದು.

ಪೊಲೀಸರಿಗೆ ಸ್ಪಷ್ಟವಾದ ಮಾನವ ಹಕ್ಕುಗಳ ಕುರಿತು ಅರಿವಿದ್ದರೆ ಅಂತಹಃ ಕಾರ್ಯಗಳನ್ನು ಯಶಸ್ವಿಯಾಗಿ

ಕಾರ್ಯಗತಗೊಳಿಸಲು ಸಾಧ್ಯ. ಅವರುಗಳ ಕಾರ್ಯ ಸ್ವರೂಪದಿಂದ, ಪೊಲೀಸರು ಅಪಕೃತ್ಯಗಳಿಗೆ ಬಲಿಪಶುಗಳಾಗಿರುವ ವ್ಯಕ್ತಿಗಳೊಡನೆ ಮತ್ತು ಕಾನೂನಡಿ ತಿಕ್ಕಾಟ ಹೊಂದಿರುವ ವ್ಯಕ್ತಿಗಳೊಡನೆ ವ್ಯವಹರಿಸಬೇಕಾಗುವುದು. ಆದುದರಿಂದ, ಪೊಲೀಸರು ವ್ಯಕ್ತಿಗಳ ಹಕ್ಕುಗಳ ಬಗ್ಗೆ ಸೂಕ್ಷ್ಮಗ್ರಾಹಿಗಳಾಗಬೇಕು, ವಿಷೇಶವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸುವಾಗ ಸಮಾಜದ ನಿಮ್ನ ವರ್ಗಗಳ ಹಕ್ಕುಗಳು, ಮತ್ತು ಅವರುಗಳನ್ನು ಮೌಲ್ಯದಿಂದ ಕಾಣಬೇಕು.

ದೊಡ್ಡ ಪ್ರಮಾಣದ ದೃಷ್ಟಿಯಲ್ಲಿ ನೋಡಿದಾಗ, ಮಾನವ ಹಕ್ಕುಗಳು ನೆಪಮಾತ್ರದ ಹಕ್ಕುಗಳ ಅಂಶಗಳಾಗಿರುವುದಿಲ್ಲ, ಅದರೆ ಅವುಗಳು ಪೋಲೀಸರು ಕಾನೂನು ಜಾರಿಮಾಡುವಲ್ಲಿ ಸಹಾಯಕಾರಿಯಾಗಿದೆ.

ಆಯೋಗವು ನಮ್ಮ ಪೊಲೀಸ್ ಬಲದ ಪ್ರಮುಖ ಅಂಗವಾಗಿರುವ ಹಾಗೂ ಮಾನವ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪ್ರಥಮ ಪಾತ್ರ ವಹಿಸುವ ಪೊಲೀಸ್ ಪೇದೆಗಳಿಗಾಗಿ ಮಾರ್ಗದರ್ಶಿ ಸೂತ್ರಗಳನ್ನು ಈ ಪುಸ್ತಿಕೆಯನ್ನು ಪ್ರಕಟಿಸಲು ನಿರ್ಧರಿಸಿದೆ. ಈ ಪುಸ್ತಿಕೆಯ ತಮ್ಮ ಕಾರ್ಯಗಳನನು ಹೆಚ್ಚು

KANNADA:Layout 1 02/11/11 5:04 PM Page 8

ದಕ್ಷವಾದ ರೀತಿಯಲ್ಲಿ ನಿರ್ವಹಿಸಲು ಸಹಾಯಕಾರಿಯಾಗುವುದು.

ಆಯೋಗದ ಸಂಶೋಧಕರಾದ ಡಾ. ಅಪರ್ಣಾ ಶ್ರೀವಾಸ್ತವರವರು ನಿರ್ಮಿಸಿದ ವಿಷಯಗಳು, ಕೆಲವು ಮೊದಲ ಅಧ್ಯಾಯಗಳನ್ನು ಬರೆದು, ಮತ್ತು ಕ್ರೋಢೀಕರಿಸಿದುದಕ್ಕಾಗಿ, ಆಯೋಗವು ತನ್ನ ಪ್ರಶಂಸೆಯನ್ನು ದಾಖಲಿಸುತ್ತದೆ. ತನಿಖಾ ವಿಭಾಗವು ಇತರ ಅಧ್ಯಾಯಗಳನ್ನು ಬರೆದುಕೊಟ್ಟಿದೆ. ಈ ಯೋಜನೆಯನ್ನು ಶ್ರೀ ಸುನಿಲ್ ಕೃಷ್ಣ, ಐ.ಪಿ.ಎಸ್. ಮಹಾ ನಿರ್ದೇಶಕರು (ತನಿಖೆ) ಇವರ ಮಾರ್ಗದರ್ಶನದಲ್ಲಿ ಕೈಗೊಳ್ಳಲಾಗಿದೆ.

ದಿನಾಂಕ ಡಿಸೆಂಬರ್ 10



ಪಿ.ಸಿ. ಶರ್ಮಾ

ಸದಸ್ಯರು

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

❖❖❖

# ಅಧ್ಯಾಯ–1
# ಬಂಧನ

ಹಲವು ಸನ್ನಿವೇಶಗಳಲ್ಲಿ ವ್ಯಕ್ತಿಗಳನ್ನು ಬಂಧಿಸಲು ಮತ್ತು ಅವಶ್ಯಕತೆ ಬಿದ್ದಲ್ಲಿ ಬಲವಂತವಾಗಿ ಕ್ರಮಕೈಗೊಳ್ಳಲು ಕಾನೂನು ಪೊಲೀಸರಿಗೆ ಅಧಿಕಾರ ನೀಡಿದೆ.

ಅಧ್ಯಯನದಿಂದ ಹಲವಾರು ನಿರೋಧಕ ಬಂಧನಗಳಲ್ಲಿ ಮ್ತು ಸಣ್ಣ ಪುಟ್ಟ ಕೃತ್ಯಗಳಿಗಾಗಿ ಬಂಧಿಸುವುದು ಬಹಳ ಹೆಚ್ಚಾಗಿದ್ದು, ವಿಚಾರಣಾಧೀನ ಬಂಧಿಗಳ ಸಂಖ್ಯೆ ತುಂಬಾ ಹೆಚ್ಚಿದ್ದು, ಮತ್ತು ಅವರುಗಳಲ್ಲಿ ಹೆಚ್ಚಿನವರು ಜಾಮೀನು ಪಡೆಯಲಾಗದೆ, ಖಾತ್ರಿದಾರರನ್ನು ಹೊಂದಿಸಲಾಗದೆ, ಬಂಧಿಖಾನೆಯಲ್ಲಿ ಉಳಿಯುವರು.

ಬಂಧನ ಮತ್ತು ನಿರೋಧಕ ಬಂಧನಗಳು ಒಬ್ಬ ವ್ಯಕ್ತಿಗೆ ಎಣಿಸಲಾಗದಷ್ಟು ಮಾನ ನಷ್ಟವನ್ನುಂಟುಮಾಡುವುದು. ನಮ್ಮ ಪದ್ಧತಿಯಲ್ಲಿ, ದುರಾದೃಷ್ಟವಶಾತ್, ಅನಾವಶ್ಯವಾಗಿ ಬಂಧನಕ್ಕೆ ಒಳಗಾಗುವ ವ್ಯಕ್ತಿಗಳಿಗೆ ಪರಿಹಾರ ನೀಡಲು ಅವಕಾಶ ವಿರುವುದಲ್ಲ.

## ಮಾಡಬೇಕಾದವುಗಳು

1. ಯಾವುದೇ ವ್ಯಕ್ತಿಯ ಜೀವಿಸುವ ಹಕ್ಕು ಅಥವಾ ವ್ಯಯಕ್ತಿಕ ಸ್ವಾತಂತ್ರ್ಯವನ್ನು, ನಿಯಮಾನುಸಾರವಲ್ಲದೆ, ವಿಹೀನಗೊಳಿಸದಂತೆ ನೋಡಿಕೊಳ್ಳುವುದು (ಭಾರತೀಯ ಸಂವಿಧಾನದ ಅನುಚ್ಛೇದ (22))

2. ಬಂಧಿಸುವ ವೇಲೆಯಲ್ಲಿ ಪೊಲೀಸ್ ಅಧಿಕಾರಿಯು ತನ್ನ ಗುರುತಿನ ಹಾಗೂ ಸ್ಥಾನದ ಬಗ್ಗೆ ಗುರುತಿನ ಪ್ಲೇಟಿನ ಮೂಲಕ ತಿಳಿಯಪಡಿಸುವುದು.

3. ಬಂಧನಕ್ಕೊಳಗಾಗುವ ವ್ಯಕ್ತಿಗೆ ಬಂಧಿಸಿಲಾಗುತ್ತಿರುವ ಕಾರಣಗಳನ್ನು ಸಂಪೂರ್ಣವಾಗಿ ತಿಳಿಯಪಡಿಸುವುದು (ಭಾರತೀಯ ಸಂವಿಧಾನದ ಅನುಚ್ಛೇದ (22))

4. ಬಂಧನಕ್ಕೆ ಒಳಪಟ್ಟ ವ್ಯಕ್ತಿಯ ಸಂಭಂದಿಕರಿಗೆ ಅಥವಾ ಆಕೆಯ/ಆತನ ಸ್ನೇಹಿತರಿಗೆ ಬಂಧಿಸಿರುವ ಬಗ್ಗೆ ಮಾಹಿತಿ ಹಾಗೂ ಬಂಧನದ ಸ್ಥಳವನ್ನು ತಿಳಿಸಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 50ಎ (1)).

5. ಬಂಧನಕ್ಕೊಳಗಾದ ವ್ಯಕ್ತಿಯ, ಬಂಧನದ ಬಗ್ಗೆ, ಮತ್ತು ಬಂಧನದ ಬಗ್ಗೆ ತಿಳಿಸಲಾದ ವ್ಯಕ್ತಿಯ ಬಗ್ಗೆ ಮಾಹಿತಿಯನ್ನು ಪೊಲೀಸ್ ಠಾಣೆಯಲ್ಲಿಟ್ಟಿರುವ ನಿರ್ಧಿಷ್ಟಗೊಳಿಸಿದ ವಹಿಯಲ್ಲಿ ನಮೂದಿಸಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 50ಎ (3))

6. ಒಬ್ಬ ವ್ಯಕ್ತಿಯನ್ನು ಬಂದಿಸಿವಾಗ ಆತನ/ಆಕೆಯ ಮೈಮೇಲೆ ಗಾಯ/ಗಳು ಆಗಿದ್ದು ಕಂಡುಬಂದಲ್ಲಿ ಆ ಕುರಿತು ಬಂಧನ ಮೆಮೋದಲ್ಲಿ ವಿಷದವಾಗಿ ನಮೂದಿಸಬೇಕು ಮತ್ತು ಬಂಧನಕ್ಕೊಳಗಾದ ವ್ಯಕ್ತಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು.

7. ಸೂರ್ಯನು ಮುಳುದಿದ ನಂತರ ಮತ್ತು ಸರ್ಯೋದಯದ ಮುನ್ನ ಮಹಿಳೆಯರನ್ನು ಬಂಧಿಸಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 46 (4)).

8. ಬಂಧನಕ್ಕೆ ಒಳಪಡುವ ವ್ಯಕ್ತಿ ಮಹಿಳೆಯಾಗಿದ್ದಲ್ಲಿ ಅವರೊಡನೆ ಮಹಿಳಾ ಪೊಲೀಸ್ ಅಧಿಕಾರಿಗಳೇ ಇತರಕ್ಕದ್ದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 46 (4)).

9. ಅಪ್ರಾಪ್ತ ವಯಸ್ಕರು ಮತ್ತು ಮಕ್ಕಳನ್ನು ಬಂಧಿಸುವಾಗ ಅವರನ್ನು ಯಾವುದೇ ಸಂದರ್ಭದಲ್ಲೂ ಹೊಡೆಯಬಾರದು ಅಥವಾ ಬಲಾತ್ಕಾರ ಪ್ರಯೋಗ ಮಾಡಬಾರದು. ಅಂತಹವರನ್ನು ಬಂಧಿಸುವಾಗ ಜವಾಬ್ದಾರಿಯುತ ನಾಗರೀಕರ ಸಹಾಯವನ್ನು ಪಡೆಯತಕ್ಕದ್ದು.

10. ಬಂಧಿಸಲ್ಪಡುವ ವ್ಯಕ್ತಿಯ ಘನತೆಗೆ ಚ್ಯುತಿ ಬಾರದಂತೆ ಗೌರವವನ್ನು ಕಾಪಾಡಬೇಕು. ಸಾರ್ವಜನಿಕವಾಗಿ ಪ್ರದರ್ಶಿಸುವುದು ಅಥವಾ ಮೆರವಣಿಗೆ ಮಾಡುವುದಕ್ಕೆ ಅನುಮತಿಸಬಾರದು.

11. ಬಂಧಿಸಿದ ವ್ಯಕ್ತಿಯ ಘನತೆಗೆ ಚ್ಯುತಿ ಬಾರದಂತೆ ಗೌರವದಿಂದ, ಯಾವುದೇ ಬಲಾತ್ಕಾರ ಅಥವಾ ಆಕ್ರಮಣವಿಲ್ಲದಂತೆ ಶೋಧನೆ ಮಾಡುವುದು. ಆ ವ್ಯಕ್ತಿಯ ಏಕಾಂಗಿತನದ ಹಕ್ಕನ್ನು ಕಾಪಾಡುವುದು. ಮಹಿಳೆಯರ ಶೋಧನೆಯನ್ನು ಇತರ ಮಹಿಳೆಯರಿಂದಲೇ ನಡೆಸಿ, ಸಭ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು. (ದಂಡ ಪ್ರಕ್ರಿಯಾ ಸಂಹಿತೆ ಕಲಂ 51 (2)).

12. ಜಾಮೀನು ಪಡಯುಬಲ್ಲಂತಹ ಅಪರಾಧ ಮಾಡಿದಲ್ಲಿ, ಬಂಧನಕ್ಕೊಳಗಾದ ಆತನು/ಆಕೆಯು ಜಾಮೀನು ಪಡೆಯಬಹುದಾದ ಕುರಿತು ಮತ್ತು ಜಾಮೀನುದಾರರನ್ನು ಪಡೆಯಲು ಅನುವು ಮಾಡಿಕೊಡುವುದು.

13. ಬಂಧನಗೊಳಿಸಿದ ಹಾಗೂ ಬಂಧನದಲ್ಲಿಟ್ಟಿರುವ ಸ್ಥಳದ ಕುರಿತು ಮಾಹಿತಿಯನ್ನು ಪೊಲೀಸ್ ನಿಯಂತ್ರಣಾ ಕೊಠಡಿಗೆ ಮತ್ತು ಜಿಲ್ಲಾ/ರಾಜ್ಯ ಕೇಂದ್ರಸ್ಥಾನಗಳಿಗೆ ತಿಳಿಸುವುದು.

## ಮಾಡಬಾರದಂತಹವುಗಳು

1. ವಾರೆಂಟ್ ಇಲ್ಲದೆ ಯಾವುದೇ ವ್ಯಕ್ತಿಯನ್ನು ಬಂದಿಸುವಾಗ, ಆಪಾದಿತ ಕೃತ್ಯದಲ್ಲಿ ಆತನು/ಆಕೆಯು ವಿಚಾರಣೀಯ ಅಪರಾದಲ್ಲಿ ತೊಡಗಿರುವ ಕುರಿತು, ತನಿಖೆ ನಡೆಸಿ, ಮತ್ತು ಆತನ/ಆಕೆಯ ಬಂಧನದ ಅವಶ್ಯಕತೆಯ ಬಗ್ಗೆ ಯುಕ್ತ ಮನದಟ್ಟು ಮಾಡಿಕೊಳ್ಳಬೇಕು. (ದಂಡ ಪ್ರಕ್ರಿಯಾ ಸಂಹಿತೆ ಕಲಂ 41).

2. ಒಬ್ಬ ವ್ಯಕ್ತಿಯು ಎಸಗಬಹುದಾದ ಅಪರಾಧವನ್ನು ತಡೆಗಟ್ಟಬಹುದಾಗಿದ್ದರೆ, ಅಂತಹ ವ್ಯಕ್ತಿಯನ್ನು ಬಂಧಿಸ ಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 15).

3. ಬಂಧನಕ್ಕೊಳಗಾದ ವ್ಯಕ್ತಿಯ ಮೇಲೆ ಅಗತ್ಯತೆಗಿಂತಾ ಹೆಚ್ಚು ಬಲಾತ್ಕಾರವನ್ನು ಒಡ್ಡಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 49 ಮತ್ತು ಭಾರತದ ಸಂವಿಧಾನದ ಅನುಚ್ಛೇದ 21).

4. ಯಾವುದೇ ಕೃತ್ಯದಲ್ಲಿ ಭಾಗಿಯಾಗಿರಬಹುದಾದಂತಹ 15 ವರ್ಷಕ್ಕಿಂತ ಕಡಿಮೆ ವಯಸ್ಸುಳ್ಳ ಹೆಂಗಸನ್ನು ಅಥವಾ ಗಂಡಸನ್ನು ಪೊಲೀಸ್ ಠಾಣೆಗೆ ಬರಮಾಡಬಾರದು. ಆಂತಹ ವ್ಯಕ್ತಿಗಳನ್ನು ವಿಚಾರಣೆ ಮಾಡುವುದಿದ್ದರೆ, ಆ ಮಹಿಳೆಯನ್ನು/ಅಪ್ರಾಪ್ತ ವಯಸ್ಕರನ್ನು ಅವರ ಮನೆಗಳಲ್ಲಿ ವಿಚಾರಣೆ ನಡಸಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160 (1)).

5. ಬಂಧಿಸಿದ ವ್ಯಕ್ತಿಯನ್ನು ದಂಡಾಧಿಕಾರಿಗಳ ಅನುಮತಿಇಲ್ಲದೆ 24 ಘಂಟೆಗಳಿಗಿಂತಾ ಹೆಚ್ಚು ಸಮಯ ಇರಿಸಿಕೊಳ್ಳಬಾರದು. (ದಂಡ ಪ್ರಕ್ರಿಯಾ ಸಂಹಿತೆ ಕಲಂ 57).

6. ಅನಿವಾರ್ಯಾ ಸಂದರ್ಭಗಳಲ್ಲಿ ಮತ್ರವಲ್ಲದೆ, ಮತ್ತು ನ್ಯಾಯಾಲಯದ ಆದೇಶದ ಹೊರತು ಕೈಕೋಳಗಳು ಅಥವಾ ಕಾಲುಗಳಿಗೆ ಸರಪಳಿಗಳ ಉಪಯೋಗ ಮಾಡಬಾರದು.

❖❖❖

# ಅಧ್ಯಾಯ-2

# ನಿರೋಧಕ ಬಂಧನ

ಪ್ರಶ್ನಿಸುವುದಕ್ಕೆ, ಗುರುತಿನ ಬಗ್ಗೆ ತನಿಖೆ ಮಾಡುವುದಕ್ಕೆ, ಮದ್ಯಪಾನ ಮಾಡಿರುವ ಬಗ್ಗೆ ತನಿಖೆ ಮಾಡುವಸಲುವಾಗಿ, ಮುಂತಾದವುಗಳಿಗೆ ಒಪ್ಪ ವ್ಯಕ್ತಿಯನ್ನು ಪೊಲೀಸರು ನಿರೋಧಕ ಬಂಧನಕ್ಕೆ ಒಳಪಡಿಸಿದರೆ, ಅಂತಹಃ ವ್ಯಕ್ತಿಯು ಪೊಲೀಸರ ವಶಕ್ಕೆ ಬರುತ್ತಾನೆ, ಆದುದರಿಂದ ಆತನು ರಾಜ್ಯದ ಅಧೀನದಲ್ಲಿ ಬರುತ್ತಾನೆ. ಆ ರೀತಿಯಾಗಿ ಅಧೀನದಲ್ಲಿರುವ ವ್ಯಕ್ತಿಗಳ ಮಾನವ ಹಕ್ಕುಗಳನ್ನು ರಾಜ್ಯದ ಸರ್ಕಾರ ಸಂರಕ್ಷಿಸಬೇಕು.

## ಮಾಡಬೇಕಾದವುಗಳು

1. ಯಾವುದೇ ವ್ಯಕ್ತಿಯನ್ನು ಪ್ರಶ್ನಿಸಬೇಕಾಗಿದ್ದರೆ, ಅವರಿಗೆ ಲಿಖಿತ ಆದೇಶದ ಮೂಲಕ ಪೊಲೀಸ್ ಠಾಣೆಗೆ ರಾಜರಾಗಳು ತಿಳಿಸಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160 (1)).

2. ನಿರೋಧಕ ಬಂಧನಕ್ಕೊಳಗಾಗುವ ವ್ಯಕ್ತಿಯ ಕುಟುಂಬ ಸದಸ್ಯರಿಗೆ ಅಥವಾ ಆತನ ಸ್ನೇಹಿತರಿಗೆ ಆತನು ಇರುವ ಸ್ಥಳವನ್ನು ತಿಳಿಯಬಡಿಸುವುದು.

3. ಪೊಲೀಸ್ ಠಾಣೆಯಲ್ಲಿ ನಿರೋಧಕ ಬಂಧನಕ್ಕೊಳಗಾಗಿರುವ ವ್ಯಕ್ತಿಯ ವಿವರಗಳನ್ನು ಸಾಮಾನ್ಯ ಡಯರಿಯಲ್ಲಿ ನಮೂದಿಸುವುದು.

4. ಪೊಲೀಸರ ನಿರೋಧಕ ಬಂಧನಕ್ಕೊಳ್ಳಗಾಗಿರುವ ವ್ಯಕ್ತಿಗೆ ವೈದ್ಯಕೀಯ ತಪಾಸಣೆ ಅಗತ್ಯವಿದ್ದಲ್ಲಿ ತಕ್ಷಣ ಒದಗಿಸುವುದು.

5. ನಿರೋಧಕ ಬಂಧನಕ್ಕೊಳಗಾಗಿರುವ ಎಲ್ಲಾ ವ್ಯಕ್ತಿಗಳನ್ನು ಗೌರವದಿಂದ ಕಾಣುವುದು.

## ಮಾಡಬಾರದಂತಹವುಗಳು

1. ನಿರೋಧಕ ಬಂಧನಕ್ಕೊಳಗಾಗಿರುವ ವ್ಯಕ್ತಿಗಳನ್ು ಹಿಂಸಿಸಬಾರದು, ಅಥವಾ ಕ್ರೂರತೆಗೆ, ಅಮಾನಾವೀಯತೆಗೆ, ಅಥವಾ ಕೀಳು ಮಟ್ಟದ ವರ್ತನೆ ಅಥವಾ ಶಿಕ್ಷೆಗೆ ಒಳಪಡಿಸಬಾರದು.

2. ನಿರೋಧಕ ಬಂಧನಕ್ಕೊಳಗಾರಿರುವ ವ್ಯಕ್ತಿಗಳನ್ನು ಬಲಾತ್ಕಾರದಿಂದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಬಾರದು, ಮತ್ತು ಅನಾವಶ್ಯವಾಗಿ ನಿಂದನೆಗೆ ಗುರಿಯಾಗುವಂತೆ ಮಾಡಬಾರದು, ಅಥವಾ ಇತರ ವಿರುದ್ಧ ಸಾಕ್ಷಿ ನೀಡುವಂತೆ ಮಾಡಬಾರದು.

3. ಪ್ರಶ್ನಿಸುವ ನೆಪದಲ್ಲಿ ಯಾವುದೇ ವ್ಯಕ್ತಿಯನ್ನು ಅವಶ್ಯಕತೆಗಿಂತ ಹೆಚ್ಚು ಕಾಲ ನಿರೋಧಕ ಬಂಧನಕ್ಕೊಳಪಡಿಸಬಾರದು, ತಪ್ಪಿದಲ್ಲಿ ಅವರನ್ನು ಅಕ್ರಮ ಬಂಧನಕ್ಕೊಳ ಪಡಿಸಿದಂತಾಗುವುದು.

❖❖❖

## ಅಧ್ಯಾಯ-3
# ಮಹಿಳೆಯರ ರಕ್ಷಣೆ

ಭಾರತ ಸಂವಿಧಾನ ಮಹಿಳೆಯರಿಗೆ ಸಮಾನತೆಯ ಖಾತರಿ ನೀಡಿದೆ. ಮಹಿಳೆಯರ ವಿರುದ್ಧ ಅಪಕೃತ್ಯವೆಸಗುವುದು ಸದಾ ಕಾಲಕ್ಕೂ ಭಾರದಲ್ಲಿ ಕಾನೂನು ಜಾರಿಗೊಳಿಸುವ ದಿಶೇಯಲ್ಲಿ ಒಂದು ವಿಶೇಷವಾದ ವಿವಾದಾಂಶವಾಗಿ ಉಳಿದಿದೆ.

### ಮಾಡಬೇಕಾದವುಗಳು

1. ಒಬ್ಬ ಮಹಿಳೆಯ ಶೋಧನೆ ಮಾಡಬೇಕಾದಾಗ, ಮತ್ತೊಬ್ಬ ಮಹಿಳೆಯಿಂದಲೆ ಆಕೆಯ ಏಕಾಂಗಿತನದ ಹಕ್ಕಿನ ಬಗ್ಗೆ ಮತ್ತು ಸಭ್ಯತೆಯನ್ನು ಕಾಳಜಿ ವಹಿಸಿ ಶೋಧನೆ ಮಾಡಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 51(2)).
2. ಶಂಕಿತ ಮಹಿಳೆಯನ್ನು ಪೊಲೀಸ್ ಠಾಣೆಯ ಪ್ರತ್ಯೇಕ ಕೊಠಡಿಯಲ್ಲಿರಿಸಬೇಕು (ಶೀಲಾ ಬಾರ್ಸೆ / ವಿರುದ್ಧ / ಮಹಾರಾಷ್ಟ್ರ ರಾಜ್ಯ).
3. ಸಾಧ್ಯವಾಷ್ಟು ಮಟ್ಟಿಗೆ, ಮಹಿಳಾ ಪೊಲೀಸ್ ಅಧಿಕಾರಿಯ ಇರುವಿಕೆಯಲ್ಲಿ ಒಬ್ಬ ಮಹಿಳೆಯನ್ನು ಬಂಧನಕ್ಕೊಳ ಪಡಿಸಬೇಕು (ದಂಡ ಪ್ರಕ್ರಿಯಾ ಸಂಹಿತೆ ಕಲಂ 51(2)).

4. ತಮ್ಮ ಗಮನಕ್ಕೆ ಬಂದಂತಹ ಕೌಟುಂಬಿಕ ಹಿಂಸಾಚಾರಗಳ ಕುರಿತು ಪೊಲೀಸ್ ಠಾಣಾಧಿಕಾರಿಗೆ ಒಂದು ವರದಿಯನ್ನು ಸಲ್ಲಿಸುವುದು.

5. ಅಪಕೃತ್ಯಕ್ಕೊಳಗಾದ ಮಹಿಳೆಯರನ್ನು, ವಿಶೇಷವಾಗಿ ಬಲಾತ್ಕಾರ ಸಂಭೋಗಕ್ಕೆ ಮತ್ತು ಉಪದ್ರವಕ್ಕೊಳಗಾದವರನ್ನು, ಸಹಾನೂಭುತಿಯಿಂದ ಕಾಣುವುದು ಮತ್ತು ಅವರ ಏಕಾಂಗಿತನದ ಬಗ್ಗೆ ಸಾಕಷ್ಟು ಗೌರವವನ್ನು ಹೊಂದಿರುವುದು.

6. ಕೌಟುಂಬಿಕ ಹಿಂಸಾಚಾರಗಳ ವಿಷಯಗಳಲ್ಲಿ ಬಾಧಿತಳಾದ ಮಹಿಳೆಗೆ ಆಕೆಗೆ ಕಾನೂನಡಿ ಇರುವ ರಕ್ಷಣೆಯ ಕುರಿತು ತಿಳಿಯಪಡಿಸಿ ಸೂಕ್ತ ಪರಿಹಾರವನ್ನು ಪಡೆಯುವುದು.

**ಮಾಡಬಾರದಂತಹವುಗಳು**

1. ಯಾವುದೇ ಕೇಸಿಗೆ ಸಂಬಂಧಿಸಿದ ಮಹಿಳೆಯನ್ನು ಪೊಲೀಸ್ ಠಾಣೆಗೆ ಬರಮಾಡಿಕೊಳ್ಳಬಾರದು. ಅಂತಹ ಮಹಿಳೆಯರನ್ನು, ಅವರ ವಾಸ ಸ್ಥಳದಲ್ಲಿಯೇ ಪ್ರಶ್ನಿಸತಕ್ಕದ್ದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160 (1)).

2. ಸೂರ್ಯನು ಮುಳುಗಿದ ನಂತರ ಮತ್ತು ಸೂರ್ಯೋದಯದ ಮುನ್ನ, ವಿಶೇಷವಾದ ಸನ್ನಿವೇಶಗಳನ್ನು ಹೊರತುಪಡಿಸಿ, ಮಹಿಳೆಯರನ್ನು ಬಂಧಿಸಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 46 (4)).

❖❖❖

# ಅಧ್ಯಾಯ–4

# ಮಕ್ಕಳ ರಕ್ಷಣೆ

ಮಕ್ಕಳ ಬದುಕುಳಿಯುವುದು, ಅಭಿವೃದ್ಧಿ ಮತ್ತು ಸಂರಕ್ಷಣೆಯ ಕುರಿತು ಭಾರತ ಸಂವಿಧಾನದ ಭಾಗ–೩ (ಮೂಲಭೂತ ಅಧಿಕಾರಗಳು) ಮತ್ತು ಭಾಗ–4 (ರಾಜ್ಯದ ಕಾರ್ಯನೀತಿಗಳ ನಿರ್ದೇಶಕ ತತ್ವಗಳು) ಉಪಬಂಧಗಳನ್ನು ಹೊಂದಿದೆ. ರಾಷ್ಟ್ರಾದ್ಯಂತ 18 ವರ್ಷ ವಯಸ್ಸಿನವರೆಗಿನ ತರುಣರ ರಕ್ಷಣೆಗಾಗಿ, ತರುಣರ ನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯಿದೆ, 200ಯು ಏಕರೂಪವಾದ ಕಾನೂನು ಚೌಕಟಟು ಹೊಂದಿದೆ.

## ಮಾಡಬೇಕಾದವುಗಳು

1. ಮಕ್ಕಳನ್ನು ಸಭ್ಯತೆಯಿಂದ ಕಾಣಬೇಕು ಮತ್ತು ಅವರು ಸಾಮಾನ್ಯ ರೀತಿಯಲ್ಲಿ ಉಡುಪುಧರಿಸಿರುವಾಗ ಮಾತ್ರ ಅವರನ್ನು ಪ್ರಶ್ನಿಸತಕ್ಕದು.

2. ಒಬ್ಬ ಮಗುವನ್ನು ಪ್ರಶ್ನಿಸಬೇಕಾದರೆ, ಆತನನ್ನು ಆತನು ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿಯೇ ಪ್ರಶ್ನಿಸತಕ್ಕದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160).

3. ಕಾನೂನು ತಿಕ್ಕಾಟಕ್ಕೆ ಸಿಲುಕಿರುವ ತರುಣರನ್ನು ಬಂಧಿಸಿದಾಗ, ಆತನನ್ನು ವಿಶೇಷ ತರುಣ ಪೊಲೀಸ್ ಘಟಕಕ್ಕೆ ಅಥವಾ ನೇಮಿತ ಪೊಲೀಸ್ ಅಧಿಕಾರಿಗೆ ವಹಿಸತಕ್ಕದ್ದು. (ತರುಣರ ನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯಿದೆ, 2000ಯ ಕಲಂ 10)

4. ಬಂಧನಗೊಳಿಸುವಾಗ, ಮಕ್ಕಳ ವಯಸ್ಸನ್ನು ಮುಂದಿನ ಕ್ರಮಕೈಗೊಳ್ಳುವ ಮುಂಚಿತವಾಗಿ ತಿಳಿದುಕೊಳ್ಳುವುದು.

5. ಬಂಧನಗೊಳಿಸಿದಾಗ, ಮಕ್ಕಳನ್ನು ಬಾಲಾಪರಾಧ ನ್ಯಾಯಾಲಯದ ಮುಂದೆ ತಡಮಾಡದೆ ಹಾಜರು ಪಡಿಸಿವುದು. ಯಾವುದೇ ಪ್ರಕರಣದಲ್ಲಿ ತೆಗೆದುಕೊಂಡ ಸಮಯವು 24 ಗಂಟೆಗಳಿಗಿಂತ ಹೆಚ್ಚಾಗಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 57).

6. ಮಕ್ಕಳನ್ನು ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಮತ್ತು ಅಪಾಯಕಾರಿ ಕೆಲಸಕಾರ್ಯಗಳಲ್ಲಿ ತೊಡಗಿಸುವುದನ್ನು ನಿರ್ಭಂದಿಸಲಾಗಿದೆ. (ಭಾರತ ಸಂವಿಧಾನದ 24ನೇ ಅನುಚ್ಛೇದ). ಅಂತಹ ಘಟಣೆಗಳನ್ನು ಗುರುತಿಸಿ ಆ ಬಗ್ಗೆ ವರದಿಯನ್ನು ಸಂಬಂಧಿತ ಪ್ರಾಧಿಕಾರಗಳಿಗೆ ತಿಳಿಸುವುದು

(ಬಾಲ ಕಾರ್ಮಿಕ ಕೆಲಸ (ನಿಷೇಧ ಮತ್ತು ನಿಭಂದನೆ) ಕಾಯಿದೆ, 1986).

7. ಜೀತದಾಳಾಗಿರುವ ಮಕ್ಕಳನ್ನು ಬಿಡುಗಡೆಗೊಳಿಸಲು ಸೂಕ್ತ ಕ್ರಮಕೈಗೊಳ್ಳಬೇಕು (ಜೀತಾದಾಳು ಪದ್ದತಿ (ರದ್ದತಿ) ಕಾಯಿದೆ, 1976).

8. ಹಿಂದೂ ವಿವಾಹ ಕಾಯಿದೆ, 1955ರಡಿ ಮಕ್ಕಳ ಮದುವೆ ಮಾಡುವುದನ್ನು ನಿಷೇಧಿಸಲಾಗಿದೆ. ಮಕ್ಕಳ ಮದುವೆಯನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಳ್ಳಬೇಕು.

**ಮಾಡಬಾರದಂತಹಾವುಗಳು**

1. ಯಾವುದೇ ಹೆಣ್ಣು ಮಗುವನ್ನು ಪೊಲೀಸ್ ಠಾಣೆಗೆ ಪ್ರಶ್ನಿಸುವುದಕ್ಕಾಗಿ ಬರುವಂತೆ ಮಾಡಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160).

2. 15 ವರ್ಷಗಳಿಂತ ಕಡಿಮೆ ಇರುವ ಗಂಡು ಮಗುವನ್ನು ಪೊಲೀಸ್ ಠಾಣೆಗೆ ಪ್ರಶ್ನಿಸುವುದಕ್ಕಾಗಿ ಬರುವಂತೆ ಮಾಡಬಾರದು (ದಂಡ ಪ್ರಕ್ರಿಯಾ ಸಂಹಿತೆ ಕಲಂ 160).

3. ತರುಣರನ್ನು ಪೊಲೀಸು ಲಾಕ್ ಅಪ್‌ನಲ್ಲಿರಸಬಾರದು (ಬಾಲಕರ ನ್ಯಾಯ ಕಾಯಿದೆ, 1986 ಕಲಂ 18)

4. 7 ವರ್ಷಗಳಿಗಿಂತ ಕಡಿಮೆ ಇರುವ ಮಕ್ಕಳನ್ನು ಬಂಧಿಸಬಾರದು (ದಂಡ ಸಂಹಿತೆ ಕಲಂ 82ರ ಪ್ರಕಾರ 7 ವರ್ಷಗಳಿಗಿಂತ ಕಡಿಮೆ ಇರುವ ವ್ಯಕ್ತಿಯ ಎಸಗುವ ಯಾವುದೇ ಅಪರಾಧವುಅಪರಾಧವಲ್ಲ)

5. ಪ್ರಸಾರಾಂಗಗಳಿಗೆ ಬಂಧಿಸಿರುವ ತರುಣರ ಗುರುತಿನ ಕುರಿತು ಯಾವುದೇ ಮಾಹಿತಿ ನೀಡಬಾರದು.

6. ವಯಸ್ಕ ವ್ಯಕ್ತಿಯೊಡನೆ ಯಾವುದೇ ತರುಣನನ್ನು ಒಂದೇ ತರದ ಆರೋಪಗಳಾಗಿದ್ದರು ಸಹ, ಆರೋಪ ಪಟ್ಟಿಯಲ್ಲಿ ಸೇರಿಸಬಾರದು.

❖❖❖

# ಅಧ್ಯಾಯ–5

# ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ಹಕ್ಕುಗಳ ರಕ್ಷಣೆ

2001 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಶೇಕಡಾ 24ರಷ್ಟು ಜನಸಂಖ್ಯೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಾಗಿದ್ದಾರೆ–ಅವರಲ್ಲಿ ಪರಿಶಿಷ್ಠ ಜಾತಿಯವರು ಶೇಕಡಾ 16ರ ಕ್ಕಿಂತ ಹೆಚ್ಚಿದ್ದು, ಮತ್ತು ಪರಿಶಿಷ್ಠ ಪಂಗಡದವರು ಶೇಕಡಾ ೮ ರಷ್ಟಿದ್ದಾರೆ.

ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ಹಕ್ಕುಗಳ (ದೌರ್ಜನ್ಯ ನಿವಾರಣೆ) ಕಾಯಿದೆ, 1989ಯು, ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ವ್ಯಕ್ತಿಗಳ ವಿರುದ್ಧ ಎಸಗಬಹುದಾಂತಹ ಅಪರಾಧ / ಅಪಕೃತ್ಯಗಳನ್ನು ತಡೆಗಟ್ಟಲು ಒಂದು ವಿಶೇಷವಾದ ಕಾನೂನು ರಚನೆ.

## ಮಾಡಬೇಕಾದವುಗಳು

1. ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ವ್ಯಕ್ತಿಗಳನ್ನು ಕಾನೂನು ದೃಷ್ಟಿಯಲ್ಲಿ ಸಮಾನವಾಗಿ ಕಾಣುವುದು (ಭಾರತ ಸಂವಿಧಾನ ಅನುಚ್ಛೇದ 14).

2. ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ಹಕ್ಕುಗಳ (ದೌರ್ಜನ್ಯ ನಿವಾರಣೆ) ಕಾಯಿದೆ, 1989ಯಡಿ ನಮೂದಿಸಲಾದ ಪರಿಶಿಷ್ಠ ಪಂಗಡಗಳ ವ್ಯಕ್ತಿಗಳ ವಿರುದ್ಧ ಎಸಗುವ ಎಲ್ಲಾ ಅಪರಾಧಗಳ ಕುರಿತು ಮಾಹಿತಿಯನ್ನು ಪೊಲೀಸ್ ಠಾಣಾಧಿಕಾರಿಗೆ ತಿಳಿಸುವುದು.

3. ಪೊಲೀಸ್ ಠಾಣೆಯ ಪರಿಧಿಯಲ್ಲಿರುವ ಎಲ್ಲಾ ಪರಿಶಿಷ್ಠ ಜಾತಿ/ಪರಿಶೀಷ್ಠ ಪಂಗಡಗಳ ವ್ಯಕ್ತಿಗಳಿಗೆ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳ ಹಕ್ಕುಗಳ (ದೌರ್ಜನ್ಯ ನಿವಾರಣೆ) ಕಾಯಿದೆ, 1989 ರಡಯಿರುವ ಹಕ್ಕುಗಳ ಮತ್ತು ರಕ್ಷಣೆಗಳ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವುದು.

**ಮಾಡಬಾರದಂತಹವುಗಳು**

1. ಯಾವುದೇ ನಾಗರೀಕರನನ್ನು ಆತನ ಜಾತಿಯನ್ನು ಹಿಡಿದು ತಾರತಮ್ಯ ಮಾಡಬಾರದು (ಭಾರತ ಸಂವಿಧಾನ ಅನುಚ್ಛೇದ 15)

2. ಯಾವುದೇ ವ್ಯಕ್ತಿಯು ಅಸ್ಪೃಶ್ಯತೆಯನ್ನು ಮುಂದುವರೆಸುವುಕ್ಕೆ ಮತ್ತು ಆಚರಿಸುವದಕ್ಕೆ ಅವಕಾಶ ನೀಡಬಾರದು (ಭಾರತ ಸಂವಿಧಾನ ಅನುಚ್ಛೇದ 17).

❖❖❖

## ಅಧ್ಯಾಯ–6

# ಹಿರಿಯ ನಾಗರೀಕರ ಹಕ್ಕುಗಳ ರಕ್ಷಣೆ

ವಯಸ್ಸಾಗುವಿಕೆ ಒಂದು ಸ್ವಾಭಾವಿಕ ಕಾರ್ಯವಿಧಾನ, ಇದು ಮಾನವನ ಜೀವನ ಚಕ್ರದಲ್ಲಿ ಅನಿರ್ವಾವಾಗಿ ಆಗುವಂತಹುದು. ವಯಸ್ಸಾಗುತಿದ್ದಂತೆ, ವಿಷೇಶವಾಗಿ ಮಾನವನ ದೇಹದ ಅಂಗಾಂಗಳ ಕಾರ್ಯಕ್ಷಮತೆ ಕುಗ್ಗುವುದರಿಂದ ಹಿರಿಯರಲ್ಲಿ ಹಲವಾರು ಸವಾಲುಗಳು ಉದ್ಭವಿಸುವವು. ಎಲ್ಲಾ ನಾಗರೀಕರು, ವಿಶೇಶವಾಗಿ ಪೊಲೀಸರು, ಹಿರಿಯ ನಾಗರೀಕರ (60 ವರ್ಷಗಳು ಮತ್ತು ಹೆಚ್ಚು) ಹಕ್ಕುಗಳ ರಕ್ಷಣೆ ಮಾಡಬೇಕಾದ ನೈತಿಕ ಹೊಣೆಯನ್ನು ಹೊಂದಿರುತ್ತಾರೆ.

### ಮಾಡಬೇಕಾದವುಗಳು

1. ವಯಸ್ಸಾದ ತಾಯಿ ತಂದೆಯರು ಅವರನ್ನು ಕಾಪಾಡಿಕೊಳ್ಳಲು ಸಾಧ್ಯವಾಗದ್ದಿದ್ದಾಗ ಅವರನ್ನು ಕಾಪಾಡುವುದು ಎಲ್ಲ ಮಕ್ಕಳ ಕರ್ತವ್ಯವಾಗಿದೆ (ದಂಡ ಪ್ರಕ್ರಿಯಾ ಸಂಹಿತೆ ಕಲಂ 125)
2. ಹಿರಿಯ ನಾಗರೀಕರು ದುರ್ಬಲತೆಗೆ ತುತ್ತಾಗುವುದರಿಂದ, ತಮ್ಮ ಪರಿಧಿಯಲ್ಲಿ/ವ್ಯಾಪ್ತಿಯಲ್ಲಿರುವ ಹಿರಿಯ

ನಾಗರೀಕರೊಡನೆ ನಿಯಮಿತವಾಗಿ ಪರಸ್ಪರ ಸಂಪರ್ಕ ವಿಟ್ಟುಕೊಳ್ಳಬೇಕು.

3. ಯಾವುದಾದರು ಅನಿವಾರ್ಯ ಸಂಧರ್ಬಗಳಲ್ಲಿ ಹಿರಿಯ ನಾಗರೀಕರನ್ನು ಬಂಧಿಸಬೇಕಾದಲ್ಲಿ, ಅವರಿಗೆ ಸೂಕ್ತ ಸೌಜನ್ಯತೆಯುನನು ತೋರುವುದು ಮತ್ತು ಆತನನ್ನು/ಆಕೆಯುನ್ನು ವೈದ್ಯಕೀಯು ಪಕೀಕ್ಷೆಗೆ ಸಾಧ್ಯವಾದಷ್ಟು ಬೇಗ ಒಳಪಡಿಸುವುದು.

4. ಪೊಲೀಸ್ ಠಾಣೆಗೆ ಭೇಟಿ ನೀಡುವ ಹಿರಿಯ ನಾಗರೀಕರಿಗೆ ಸೂಕ್ತ ಗೌರವವನನ್ನು ತೋರಿ, ಅವರ ತೊಂದರೆಗಳನ್ನು ಆದ್ಯತೆಯ ಮೇರೆಗೆ ಆಲಿಸುವುದು.

## ಮಾಡಬಾರದಂತಹವುಗಳು

1. ಅನಿವಾರ್ಯ ಸನ್ನಿವೇಶಗಳಲ್ಲದೆ, ಸಾಮಾನ್ಯವಾಗಿ ಹಿರಿಯ ನಾಗರೀಕರನ್ನು ಬಂಧಿಸುವುದಾಗಲಿ, ನಿರೋಧಕ ಬಂಧನಕ್ಕೊಳಪಡಿಸುವುದಾಗಲಿ ಮಾಡಬಾರದು.

2. ಕಾನೂನಿನಡಿ ಮತ್ತು ತೊಂದರೆಗಳಿಗೆ ಒಳಗಾಗಿರುವ ಹಿರಿಯ ನಾಗರೀಕರೊಡೆ ನಡುಸಾಗಿ, ಅಥವಾ ಕಠಿಣವಾಗಿ ನಡೆದುಕೊಳ್ಳಬಾರದು.

❖❖❖

## ಅಧ್ಯಾಯ–7

# ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ

ಧರ್ಮದ ಆಧಾರದ ಮೇಲೆ ತಾರತಮ್ಯ ತೋರುವುದನ್ನು ಭಾರತ ಸಂವಿಧಾನ ಅನುಚ್ಛೇದ 14, 15 ಮತ್ತು 16 ರಡಿ ನಿಷೇಧಿಸಲಾಗಿದೆ. ಅಲ್ಲದೇ, ಭಾರತ ಸಂವಿಧಾನ ಅನುಚ್ಛೇದ 29 ಮತ್ತು 30 ಅಲ್ಪಸಂಖ್ಯಾತರ ಸಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳ ಕುರಿತಾಗಿದೆ.

(ಈ ಅಧ್ಯಾಯವು ಧರ್ಮ ಆಧಾರಿತ ಅಲ್ಪಸಂಖ್ಯಾತರನ್ನು ಕುರಿತು ಮಾತ್ರವಾಗಿದೆ)

### ಮಾಡಬೇಕಾದವುಗಳು

1. ಅಲ್ಪಸಂಖ್ಯಾತರ ವಿಷಯಗಳನ್ನು ಸಾಕಷ್ಟು ಜಾಗ್ರತೆಯಿಂದ ಮತ್ತು ಸೂಕ್ಷ್ಮ ರೀತಿಯಲ್ಲಿ ವ್ಯವಹಾರಿಸಬೇಕು.
2. ಪ್ರಾರ್ಥನಾ ಮಂದಿರಗಳಿಗೆ ಅಗಿಂದ್ದಾಗೆ ಭೇಟಿ ನೀಡಿ, ಕೋಮುವಾದ ಒತ್ತಡಗಳನ್ನು ಒಡ್ಡುವ ದುಶ್ಚೇಷ್ಟೆಗಳಲ್ಲಿ ತೊಡುಗುವವರ ಮೇಲೆ ನಿಗಾ ವಹಿಸುವುದು.
3. ಹಬ್ಬ ಹರಿದಿನಗಳಲ್ಲಿ ಹೆಚ್ಚಿನ ಜಾಗ್ರತೆಯನ್ನು ವಹಿಸುವುದು

ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಕೋಮುವಾದ ವಿವಾದಗಳನ್ನು ತಡೆಗಟ್ಟುವುದು.

4. ಅಲ್ಪಸಂಖ್ಯಾತರ ಮನೆಗಳಿಗೆ, ಪೂಜಾ ಸ್ಥಳಗಳಿಗೆ, ಅಥವಾ ಸಂಸ್ಥೆಗಳಿಗೆ ಭೇಟಿ ನೀಡುವ ಸಮಯದಲ್ಲಿ, ಅವರ ಭಾವನೆಗಳನ್ನು ಮತ್ತು ಧಾರ್ಮಿಕ ಆಚಾರಗಳನ್ನು ಸೂಕ್ತ ಗೌರವದೊಂದಿಗೆ ನಡೆದುಕೊಳ್ಳುವುದು.

5. ಅಲ್ಪಸಂಖ್ಯಾತರ ಪ್ರಭಾವಿತ ವ್ಯಕ್ತಿಗಳೊಡನೆ ಸತತವಾಗಿ ಸಂಪರ್ಕವನ್ನಿಟ್ಟುಕೊಂಡು, ಸಂದಿಗ್ಧ ಪರಿಸ್ಥಿತಿಗಳಲ್ಲಿ ಅಗತ್ಯವಿದ್ದಾಗ ಅವರುಗಳ ಸಹಾಯವನ್ನು ಪಡೆಯುವುದು.

6. ಜನರು ತಮ್ಮ ಧರ್ಮವನ್ನು ಬಹಿರಂಗವಾಗಿ ಆಚರಿಸುವ ಹಕ್ಕನ್ನು ಚಲಾಯಿಸಲು ಅಣಿಮಾಡಿಕೊಡುವುದು (ಭಾರತ ಸಂವಿಧಾನ ಅನುಚ್ಛೇದ 25 (1)).

7. ಎಲ್ಲಾ ಮತದ ಪ್ರಮುಖ ವ್ಯಕ್ತಿಗಳೊಡನೆ ಸೌಜನ್ಯತೆಯಿಂದ ನಡೆದುಕೊಳ್ಳುವುದು.

## ಮಾಡಬಾರದಂತಹವುಗಳು

1. ಧರ್ಮ ಸಮುದಾಯದ ಕುರಿತಾದ ವಿಷಯಗಳನ್ನು ವ್ಯವಹರಿಸುವಾಗ ಯಾವುದೇ ಪಕ್ಷಪಾತವನ್ನು ತೋರ್ಪಡಿಸಬಾರದು.
2. ಯಾವುದೇ ನಾಗರೀಕನನ್ನು ಆತನ ಧರ್ಮವನ್ನು ಹಿಡಿದು ತಾರತಮ್ಯ ಮಾಡಬಾರದು (ಭಾರತ ಸಂವಿಧಾನ ಅನುಚ್ಛೇದ 15 (1), (2)).
3. ಯಾವುದೇ ಧಾರ್ಮಿಕ ವಿಷಯಗಳ ಕುರಿತು ಮಾಹಿತಿ / ದೂರ ಇದ್ದಲ್ಲಿ, ಅವನ್ನು ತಿರಸ್ಕರಿಸಬಾರದು ಮತ್ತು ಕ್ರಮಕೈಗೊಳ್ಳುವಲ್ಲಿ ವಿಳಂಬ ಮಾಡಬಾರದು.

❖❖❖

## ಅಧ್ಯಾಯ–8

# ಒತ್ತಾಯದ / ಜೀತದಾಳು ಪದ್ದತಿ ಮತ್ತು ಪೊಲೀಸುಗಾರಿಕೆ

ಭಾರತ ಸಂವಿಧಾನ ಅನುಚ್ಛೇದ 23 ರಲ್ಲಿ ಒತ್ತಾಯದ / ಜೀತದಾಳು ಪದ್ದತಿ ಮತ್ತು ಇತರ ಪದ್ದತಿಗಳನ್ನು ನಿಷೇಧಿಸಲಾಗಿದೆ. ಜೀತದಾಳು ಪದ್ದತಿ (ನಿಷೇದ) ಕಾಯಿದೆ, 1976ರಂತೆ ಜೀತದಾಳುಗಳನ್ನು ಗುರುತಿಸಿ ಅವರನ್ನು ಬಿಡುಗಡೆಗೊಳುಸುವುದು ಸಂಬಂಧಿಸಿದ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ.

### ಮಾಡಬೇಕಾದವುಗಳು

1. ನಿಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ / ಬೀಟುಗಳಲ್ಲಿ ಒತ್ತಾಯದ / ಜೀತದಾಳು ಪದ್ದತಿಯ ಅನುಸರಣೆಯ ಬಗ್ಗೆ ಜಾಗ್ರೃತರಾಗಿದ್ದು, ಒತ್ತಾಯದ / ಜೀತದಾಳು ಪದ್ದತಿಯ ಬಗ್ಗೆ ದೂರುಪಗಳಿದ್ದರೆ, ಜಿಲ್ಲಾ ಅಧಿಕಾರಿಗಳಿಗೆ ತಪ್ಪದೆ ತಿಳಿಸುವುದು.
2. ಕೆಲಸವಮಾಡುವ ಸ್ಥಳದಿಂದ ಬಿಡುಗಡೆಗೊಳಿಸಿದ ಜೀತದಾಳನ್ನು ಸ್ಥಳಾಂತರಗೊಳಿಸುವಲ್ಲಿ ಜಿಲ್ಲಾ ಅಧಿಕಾರಿಗಳಿಗೆ ಸಹಾಯವನ್ನು ಮಾಡುವುದು.

3. ಜೀತದಾಳುಗಳು ಸಮಾಜದ ಬಲಹೀನ ವರ್ಗಕ್ಕೆ ಸೇರಿದವರಾಗಿದ್ದರೆ, ಅಂದರೆ, ಮಕ್ಕಳು, ಮಹಿಳೆಯರು, ಅಲ್ಪಸಂಖ್ಯಾತರು, ಮತ್ತು ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳಿಗೆ ಸೇರಿದವರಾಗಿದ್ದರೆ, ಹಲವಾರು ಕಾಯಿದೆಗಳಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

**ಮಾಡಬಾರದಂತಹವುಗಳು**

1. ಜೀತದಾಳು ಪದ್ದತಿ (ನಿಷೇದ) ಕಾಯಿದೆ, 1976 ರಂತೆ ಜಿಲ್ಲಾ ದಂಡಾಧಿಕರಿಗಳಿಂದ ಸೂಕ್ತ ವಿಚಾರಣೆಯಿಲ್ಲದೆ ಯಾವುದೇ ಜೀತದಾಳುಗಳನ್ನು ಬಿಡುಗಡೆಗೊಳಿಸಬಾರದು.
2. ಅರ್ಥಿಕ ವಿಷಯುಗಳನ್ನು ಬಗೆಹರಿಸುವಲ್ಲಿ ನೀವು ಬಾಧಿಯಾಗಬಾರದು.
3. ವಿಚಾರಣೆ ಸಮಯದಲ್ಲಿ ನಿಮ್ಮ ನಿರ್ಣಯದ ಕುರಿತ ಯಾವುದೇ ನಿರ್ಣಾಯಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಾರದು.
4. ಭಾದಿತ ಕೂಲಿಕಾರರೊಡನೆ ದರ್ಪದಿಂದ ವರ್ತಿಸಬಾರದು.

❖❖❖

## ಅಧ್ಯಾಯ–9

# ಅನಿರೀಕ್ಷಿತ ಸೆಣೆಸಾಟ

ಪೊಲೀಸರ ಕಾರ್ಯಾಚರಣೆಯಲ್ಲಿ ಸಾಮಾನ್ಯವಾಗಿ ಪಾತಕಿಗಳ/ಅಪರಾಧಿಗಳ ಮೇಲೆ ಮಾರಕ ದಬಾವಣೆಯೊಂದಿಗೆ ಮದ್ದುಗುಂಡುಗಳನ್ನು ಉಪಯೋಗಿಸುವ ಪ್ರಕ್ರಿಯೆಯನ್ನು 'ಅನಿರೀಕ್ಷಿತ ಸೆಣೆಸಾಟ' ವೆನ್ನುವರು. ಪೊಲೀಸರು ತಮ್ಮ ಆತ್ಮ ರಕ್ಷಣೆಗಾಗಿ ಅಂತಹ ಪರಿಸ್ಥಿತಿಗಳಲ್ಲಿ ಹೆಚ್ಚು ಬಲವನ್ನು ಉಪಯೋಗಿಸುವರು.

### ಮಾಡಬೇಕಾದವುಗಳು

1. ಶಸ್ತ್ರಗಳನ್ನು ಹೊಂದಿರುವ ಪಾತಿಕಿಗಳನನು/ಅಪರಾಧಿಗಳನ್ನು ಎದುರಾದಾಗ, ಮೊದಲು ಅವರಿಗೆ ಸವಾಲುಮಾಡಬೇಕು ಮತ್ತು ಅವರನ್ನು ಶರಣಾಗರಾಗಲು ಹೇಳಬೇಕು.

2. ಪಾತಕಿಗಳ/ಅಪರಾಧಿಗಳ ಕಾರ್ಯದಿಂದ ನಿಮಗೆ ಮತ್ತು ಇತರಗಿಗೆ ಸಾವು ಅಥವಾ ತೀವ್ರವಾದ ಗಾಯಗಳಾಗುವ ಸಂಭವವಿದ್ದರೆ, ನಿಮ್ಮ ಹಾಗೂ ಇತರರ ಆತ್ಮ ರಕ್ಷಣಎಗಾಗಿ ಮಾತ್ರ ಬಲವನ್ನು ಉಪಯೋಗಿಸಬೇಕು (ಭಾರತೀಯ ದಂಡ ಸಂಹಿತೆ ಕಲಂ 97)

3. ಪಾತಕಿಗಳ / ಅಪರಾಧಿಗಳ ಕಾರ್ಯದಿಂದ ನಿಮಗೆ ಮತ್ತು ಇತರರಿಗೆ ಹಾನಿಯುಂಟಾಗುವ ಸಂಭವವಿದ್ದರೆ, ಮೊದಲಿಗೆ ನಿಮ್ಮ ಹಾಗೂ ಇತರರ ಆತ್ಮ ರಕ್ಷಣೆಗಾಗಿ ಮಾತ್ರ ಬಲವನ್ನು ಉಪಯೋಗಿಸಬೇಕು. ಇಷ್ಟೇ ಅಲ್ಲದೆ, ಎಲ್ಲಿಯವರೆಗೆ ಅವರಿಂದ ಹಾನಿಯುಂಟಾಗುವ ಭಯವಿರುವುದೋ ಅಲ್ಲಿಯವರೆಗೆ ಮಾತ್ರ ಬಲವನ್ನು ಉಪಯೋಗಿಸಬಹುದು (ಭಾರತೀಯ ದಂಡ ಸಂಹಿತೆ ಕಲಂ 102).

4. ಪಾತಕಿಗಳ / ಅಪರಾಧಿಗಳ ಕಾರ್ಯದಿಂದ ನಿಮಗೆ ಮತ್ತು ಇತರರಿಗೆ ಹಾನಿಯುಂಟಾಗುವ ಸಂಭವವಿದ್ದರೆ, ಅವರ ಸಾವಿಗಾಗಿ ಅಥವಾ ಹಾನಿಯುಂಟುಮಾಡಲು, ನಿಮ್ಮ ಮತ್ತು ಇತರರ ಆತ್ಮ ರಕ್ಷಣೆಗಾಗಿ ಮಾತ್ರ ಬಲವನ್ನು ಉಪಯೋಗಿಸಬೇಕು (ಭಾರತೀಯ ದಂಡ ಸಂಹಿತೆ ಕಲಂ 100)

## ಮಾಡಬಾರದಂತಹವುಗಳು

1. ಶಸ್ತ್ರಗಳನ್ನು ಹೊಂದಿರುವ ಪಾತಕಿಗಳನ್ನು / ಅಪರಾಧಿಗಳನ್ನು ನೋಡಿದ ತಕ್ಷಣ ಗುಂಡು ಹಾರಿಸಬಾರದು.

2. ಹೆಚ್ಚು ಬಲವನ್ನು ಉಪಯೋಗಿಸಬಾರದು – ಪಾತಕಿಗಳು /

ಅಪರಾಧಿಗಳು ಉಪಯೋಗಿಸುವ ರೀತಿಯಾದ / ಪ್ರಮಾಣದಷ್ಟೇ ಬಲವನ್ನು ನೀವು ಉಪಯೋಗಿಸುವುದು.

5. ಪಾತಕಿಗಳಿಗೆ / ಅಪರಾಧಿಗಳಿಗೆ ಹೆಚ್ಚು ಹಾನಿ / ಗಾಯವನ್ನುಂಟು ಮಾಡುವ ಸಲುವಾಗಿ ಹೆಚ್ಚು ಬಲವನ್ನು ಉಪಯೋಗಿಸದೆ, ಎಷ್ಟು ಬೇಕೋ ಅಷ್ಟು ಬಲವನ್ನು ನಿಮ್ಮ ಹಾಗೂ ಇತರರ ಆತ್ಮ ರಕ್ಷಣೆಗಾಗಿ ಮಾತ್ರ ಉಪಯೋಗಿಸಬೇಕು. (ಭಾರತೀಯ ದಂಡ ಸಂಹಿತೆ ಕಲಂ 99)

❖❖❖

## ಅಧ್ಯಾಯ–10

# ಬಯೋತ್ಪಾದಕತೆ ಮತ್ತು ಪೊಲೀಸುಗಾರಿಕೆ

ಬಯೋತ್ಪಾದಕತೆ ಒಂದು ತೀವ್ರವಾದ 'ಕಾನೂನು ಮತ್ತು ಸುವ್ಯವಸ್ಥೆ' ಯ ಪರಿಸ್ಥಿತಿಯಾಗಿದೆ. ಇದನ್ನು ಹತ್ತಿಕ್ಕಲು ಪೊಲೀಸರಿಂದ ಉದ್ರೇಕ ಸನ್ನಿವೇಶಗಳಲ್ಲಿ ಸಮನಾದ ಪ್ರತ್ಯುತ್ತರವಿರ ಬೇಕಾಗುವುದು. ಬಯೋತ್ಪಾದಕತೆ ವಿಷಯಗಳನ್ನು ನಿರ್ವಹಿಸುವಾಗ, ಪೊಲೀಸರು ಬಯೋತ್ಪಾದಕ ಘಟನೆಗಳ ಕುರಿತು ತನಿಖೆ ಮಾಡುವುದು, ಬಾಧಿತ ಪ್ರದೇಶಕ್ಕೆ ಪ್ರವೇಶವನ್ನು ರದ್ದುಮಾಡುವುದು, ಮತ್ತು ಶೋಧಿಸುವ ಕಾರ್ಯಗಳನ್ನು ಮತ್ತು ಬಯೋತ್ಪಾದಕರನ್ನು ಬಂಧಿಸುವುದನ್ನು ಮಾಡಬೇಕಾಗುವುದು, ರ.ತೆ.ಪ (ರಸ್ತೆ ತೆರವುಗೊಳಿಸುವ ಪಡೆ)ಯು ಕೆಲಸವನ್ನು, ನಾಗರೀಕರನ್ನು ತಪಾಸಣೆಗೊಳಪಡಿಸುವುದು, ನಕಾ ಬಂದಿ ಕೆಲಸವನ್ನು, ಮುಂತಾದವುಗಳು.

### ಮಾಡಬೇಕಾದವುಗಳು

1. ಸ್ಥಳೀಯರೊಡನೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕು. ಇದರಿಂದ ಬಯೋತ್ಪಾದಕರ ಮತ್ತು

ಅವರ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ದೊರೆಯುವುದು. ಸ್ಥಳೀಯರೊಡನೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳುವುದರಿಂದ, ತೀವ್ರ ಸಂದಿಗ್ಧ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿಗಳನ್ನು ಕಡಿತಗೊಳಿಸಬಹುದು.

2. ಶಂಕಿತರ ಮನೆಗಳ ಶೋಧನೆ ಮಾಡುವಾಗ, ಸ್ಥಳೀಯರನ್ನು ಜೊತೆಗೆ ಕರೆದುಕೊಂಡು ಹೋಗುವುದು ಹಾಗೂ ಅವರ ರಕ್ಷಣೆಯನ್ನು ಖಾತರಿಗೊಳಿಸುವುದು.

3. ಸಾರ್ವಜನಿಕ ಪ್ರದೇಶಗಳಲ್ಲಿ ಶೋಧನೆ ನಡೆಸಬೇಕಾದಾಗ, ನಾಗರೀಕರನ್ನು ಸೌಹಾರ್ದದಿಂದ ಕಾಣುವುದು.

4. ಮಹಿಳೆಯರನ್ನು ಶೋಧನೆ ಮಾಡಬೇಕಾದಾಗ, ಒಬ್ಬ ಮಹಿಳಾ ಪೊಲೀಸ್ ಸಿಬ್ಬಂದಿಯಿಂದಲೆ ಮಾಡಿಸಬೇಕು, ಹಾಗೂ ಮಹಿಳೆಯರ ಘನತೆಯನ್ನು ಗಮನದಲ್ಲಿರಿಸಬೇಕು.

5. ಶೋಧನೆ ಕಾರ್ಯಾಚರಣೆಯಲ್ಲಿ ಅಥವಾ ನಕಾ ಬಂದಿ ಕಾರ್ಯಗಳಲ್ಲಿ, ಮಹಿಳೆಯರನ್ನು ಹೆಚ್ಚು ಗೌರವದಿಂದ ಕಾಣುವುದು.

6. ವಯಸ್ಸಾದವರನ್ನು ಮತ್ತು ಮಕ್ಕಳನ್ನು ಕರುಣೆಯಿಂದ ನೋಡುವುದು.

7. ಬಂಧಿತ ಬಯೋತ್ಪಾದಕರ ಹಕ್ಕುಗಳನ್ನು ಇತರ ಬಂಧಿತ ಅಪರಾಧಿಗಳ ಅಥವಾ ಪಾತಕಿಗಳ ಹಕ್ಕುಗಳನ್ನು ಕಾಣುವ ರೀತಿಯೋ ಕಾಣುವುದು.

8. ಶಸ್ತ್ರಧಾರಿ ಬಯೋತ್ಪಾದಕರನ್ನು ಮೊದಲಿಗೆ ಆಕ್ರಮಣ ಮಾಡಿ, ಅವರನ್ನು ಶರಣಾಗಲು ತಿಳಿಸುವುದು. ಬಲವನ್ನು ಉಪಯೋಗಿಸುವ ಕಾರ್ಯವ ಕಾರ್ಯವನ್ನು ನಿಮ್ಮ ಹಾಗೂ ಇತರರ ಆತ್ಮ ರಕ್ಷಣೆಗಾಗಿ ಮತ್ತು ಸಾವಿನ ಅಥವಾ ತೀವ್ರವಾದ ಗಾಯಗಳಾಗುವ ಸಂಭವವಿದ್ದಾಗ ಮಾತ್ರ ಮಾಡುವುದು.

9. ಪೊಲೀಸರ ಕಾಯಾಚರಣೆಯಲ್ಲಿ ನಾಗರೀಕರಿಗೆ ಮತ್ತು ಅವರ ಆಸ್ತಿಪಾಸ್ತಿಗಳಿಗೆ ಹೆಚ್ಚು ನಷ್ಟವಾಗುವುದನ್ನು ತಡೆಗಟ್ಟುವುದು.

**ಮಾಡಬಾರದಂತಹವುಗಳು**

1. ಅನಿರೀಕ್ಷಿತ ಸೆಣೆಸಾಟ / ಶೋಧನೆ ಕಾರ್ಯಾಚರಣೆ ಕೈಗೊಳ್ಳುವಾಗ ಸಾರ್ವಜನಿಕರನ್ನು ಬಯೋತ್ಪಾದಕರ ಎದುರಿಗೆ ಗುರಾಣಿಯಾಗಿ ಮಾಡಕೊಳ್ಳಬಾರದು.

2. ಬಂಧನಕ್ಕೊಳಗಾದ ಬಯೋತ್ಪಾದಕರಿಂದ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಅವರನ್ನು ಹಿಂಸಿಸಬಾರದು.

3. ಬಯೋತ್ಪಾದಕರ ಅಥವಾ ಶಂಕಿತರನ್ನು ಅಕ್ರಮ ಬಂಧನದಲ್ಲಿರಿಸಬಾರದು.

4. ಬಯೋತ್ಪಾದಕ ಘಟನೆಯ ನಂತರ, ಹೆಚ್ಚು ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ತಡೆಯಬೇಕು.

5. ಘಟನೆ ನೆಡೆದ ಸ್ಥಳದ ಸುತ್ತಲಿರುವ ನಾಗರೀಕರನ್ನು ವಿನಾಕಾರಣ ತೊಂದರೆಗೆ ಈಡುಮಾಡಬಾರದು.

6. ರಸ್ತೆ ತೆರವುಗೊಳಿಸುವ ಪಡೆಯ ಕೆಲಸವನ್ನು ಅಥವಾ ಶೋಧನೆ ಕಾರ್ಯಾಚರಣೆಯನ್ನು ಕೈಗೊಳ್ಳುವಾಗ, ಸ್ಥಳೀಯ ಸಾರ್ವಜನಿಕರಿಂದ ಆಹಾರ ಅಥವಾ ಇತರ ಸೌಲಭ್ಯಗಳನ್ನು ಒದಗಿಸಲು ಕೋರಬಾರದು.

Translated by
Shri Shekhar G. Devasa

❖❖❖

KANNADA:Layout 1 02/11/11 5:04 PM Page 42


**ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ**

ಫರೀದ್‌ಕೋಟ್ ಹೌಸ್, ಕೋಪರ್ನಿಕಸ್ ಮಾರ್ಗ್,

ಹೊಸ ದೆಹಲಿ - 110 001

Tel.: 011-23385368 Fax: 011-23384863

E-mail: covdnhrc@nic.in Website: www.nhrc.nic.in